ಕೆಲವೊಮ್ಮೆ ಭ್ರಮಾಸ್ಥಿತಿ ಇವೆಲ್ಲವೂ ಆಗಬಹುದು. ಕೆಲವೊಮ್ಮೆ ಇವೆಲ್ಲಾ ಮೂಲ ಕಾಯಿಲೆಯ ಗುಣಲಕ್ಷಣಗಳೋ ಅಥವಾ ಮಾತ್ರೆಯ ದುರ್ಬಳಕೆಯಿಂದ ಆಗುತ್ತಿರುವ ಪರಿಣಾಮಗಳೋ ಅಂತ ನುರಿತ ವೈದ್ಯರಿಗೇ ಹೇಳೋದು ಕಷ್ಟವಾಗಿ ಬಿಡುತ್ತೆ! ಹೀಗಾದಾಗ ರೋಗಿ ಮತ್ತೆ ಮತ್ತೆ ಅದೇ ಮಾತ್ರೆ ಬಳಸುವಂತಾಗುತ್ತದೆ. ಇದರಿಂದ ಮಿದುಳಿನ ಮೇಲೆ ಹಂತ ಹಂತವಾಗಿ ಪರಿಣಾಮ ಬೀರಿ, ಮುಂದೆ ಕ್ರಮೇಣವಾಗಿ ನೆನಪಿನ ಶಕ್ತಿ ಕುಂದುವಿಕೆ ಹಾಗೂ ಬೇರೆ ಔಷಧಿಗಳಿಗೆ ಪ್ರತಿಕ್ರಿಯಿಸುವ ಕ್ಷಮತೆ ಕ್ಷೀಣಿಸುತ್ತಾ ಹೋಗುತ್ತದೆ.

ಆಗ ಮಾತ್ರೆಯ ಪ್ರಮಾಣ ಇನ್ನಷ್ಟು ಜಾಸ್ತಿ ಮಾಡಬೇಕಾಗುತ್ತದೆ. ಇದರಿಂದ ಯಕೃತ್ತಿಗೂ ಪೆಟ್ಟಾಗಿ, ನಿದ್ರೆಯೂ ಹಾಳಾಗಿ, ಯಾವಾಗಲೂ ಸುಸ್ತಾದಂತೆಯೇ ಇರುವಂತಾಗುತ್ತದೆ. ಇದರಿಂದ ಆರೋಗ್ಯದ ಮೇಲೆ ಅಷ್ಟೇ ಅಲ್ಲದೇ ಬೇರೆ ವಲಯಗಳಲ್ಲೂ ಪರಿಣಾಮ ಬೀರುತ್ತದೆ. ಹೆಚ್ಚಿನ ಮಟ್ಟದಲ್ಲಿ ಅಪಘಾತಗಳ ಸಂಭವ, ಕೆಲಸದಲ್ಲಿ ಗೈರುಹಾಜರು, ಕಾರ್ಯಕ್ಷಮತೆ ಕುಂದುವಿಕೆ, ಸಂಬಂಧಗಳ ನಿರ್ವಹಣೆಯಲ್ಲಿ ವಿಫಲತೆ, ಕೆಲಸ ಕಳೆದುಕೊಳ್ಳುವಿಕೆ– ಹೀಗೆ ಕೌಟುಂಬಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿಯೂ ಆ ವ್ಯಸನಿ ಈ ವಿಷವರ್ತುಲದ ಸುಳಿಯಲ್ಲಿ ಸಿಲುಕುತ್ತಾನೆ. ಕೆಲವೊಮ್ಮೆ ಹೃದಯ ಸಂಬಂಧಿ ಕಾಯಿಲೆ ಅಥವಾ ನಿದ್ರೆ ರೋಗವಿರುವವರು, ಈ ಮಾತ್ರೆಗಳನ್ನು ಅತಿಯಾಗಿ ಬಳಸಿದರೆ, ಹೃದಯಾಘಾತವಾಗಿ ಸಾವೂ ಸಂಭವಿಸಬಹುದು.

ಈ ಮಾತ್ರೆಗಳ ದುರ್ಬಳಕೆ ಶುರುವಾಗಲು ಹಲವಾರು ಕಾರಣಗಳು ಇದ್ದರೂ, ಇದರ ಪ್ರಮಾಣ ದಿನೇ ದಿನೇ ಏರುತ್ತಿರಲು ಪ್ರಮುಖವಾಗಿ ಮೂರು ಕಾರಣಗಳಿವೆ.

★ ಸುಲಭವಾಗಿ ಲಭ್ಯವಿರುವುದು.
★ ಕಾನೂನಿನ ಸಮ್ಮತಿಯ ಕೆಳಗೇ ದಕ್ಕಿಸಿಕೊಳ್ಳಬಹುದು.
★ ಬೇರೆ ಮಾದಕ ಪದಾರ್ಥಗಳಿಗೆ ಹೋಲಿಸಿದರೆ ಕ್ರಯವೂ ಕಡಿಮೆಯೇ.

## ಇದಕ್ಕೇನು ಪರಿಹಾರ?

ದುರ್ಬಳಕೆ ಸಾಮಾನ್ಯವಾಗಿದ್ದರೂ, ಇದಕ್ಕೆ ಹತ್ತು ಹಲವು ಆಯಮಗಳಿವೆ. ಹಾಗಿದ್ದಾಗ ಪರಿಹಾರ ಕೂಡ ಹತ್ತು ಹಲವು ಸ್ತರಗಳಲ್ಲಿ ನಡೆಯಬೇಕಾಗುತ್ತದೆ. ಮುಖ್ಯವಾಗಿ ಕಾನೂನಿನ ಸಹಾಯ, ಜನಜಾಗೃತಿ ಮೂಡಿಸುವ ಪ್ರಯತ್ನ ಹಾಗೂ ವೈದ್ಯಕೀಯ ಔಷಧೀಯ ಪದ್ಧತಿಯಲ್ಲೂ ಕೆಲವು ಸುಧಾರಣೆಗಳ ಅವಶ್ಯಕತೆ ಇದೆ. ಇಲ್ಲಿ ಔಷಧಿ ಬರೆದುಕೊಡುವ ವೈದ್ಯರು, ಔಷಧಿಯನ್ನು ಮಾರುವ ಅಂಗಡಿಯವನು ಹಾಗೂ ಔಷಧಿಯನ್ನು ಖರೀದಿಸುವ ರೋಗಿ ಇವರೆಲ್ಲರ ಪಾತ್ರವೂ ಇರಬೇಕಾಗುತ್ತದೆ.

**ವೈದ್ಯರಾದವರ ಕರ್ತವ್ಯ:** ವೈದ್ಯರಾದವರು ತಮ್ಮ ರೋಗಿಗಳು ಔಷಧಿಯ ದುರ್ಬಳಕೆ ಮಾಡುತ್ತಿದ್ದಾರೋ ಇಲ್ಲವೋ ಎಂದು ಪ್ರತೀ ಬಾರಿಯೂ ನಿಗಾ ಇಟ್ಟು ಪರಿಶೀಲಿಸಿ, ಮುಂದುವರಿಯಬೇಕು. ಔಷಧಿ ಶುರು ಮಾಡುವಾಗಲೇ, ಸರಿಯಾಗಿ ಅವುಗಳ ಮಾಹಿತಿ ಕೊಟ್ಟು ರೋಗಿಯನ್ನು ಜಾಗೃತಿಗೊಳಿಸುವುದು ಮುಂಜಾಗ್ರತೆಯ ಕ್ರಮ. ಪದೇ ಪದೇ ಬರುವ ರೋಗಿ, ಜಾಸ್ತಿ ಜಾಸ್ತಿ ಮಾತ್ರೆ ಬರೆಸಿಕೊಂಡು ಹೋಗುವ ರೋಗಿ, ಬೇರೆ ಬೇರೆ ಡಾಕ್ಟ್ರ ಹತ್ತಿರ ಹೋಗಿ **'Doctor shopping'** ಮಾಡಿ ಬಂದ ರೋಗಿ– ಇವರ ಮೇಲೆ ಒಂದು ಕಣ್ಣಿಡಬೇಕು. ದುರ್ಬಳಕೆ ಕಂಡು ಬಂದರೆ ಅದರ ಚಿಕಿತ್ಸೆಯ ಕಡೆಗೆ ಗಮನ ಹರಿಸಬೇಕು. ಚಿಕಿತ್ಸೆ ಸಿಗುವಂತೆ ನೋಡಿಕೊಳ್ಳಬೇಕು. ಅವರನ್ನು ಖಂಡಿಸದೇ,

